ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ

ಎಲ್.ಎಸ್. ನಾರಾಯಣಪ್ಪರವರ ಕಾನೂನು ಸಮ್ಮತ ವಾರಸುದಾರರು ಮತ್ತು ಇತರರು ವಿರುದ್ಧ ಕರ್ನಾಟಕ ಸರ್ಕಾರದ ಪ್ರತಿನಿಧಿಯಾಗಿ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಮತ್ತು ಇತರರು

ರಿಟ್ ಅರ್ಜಿ ಸಂ. 19137 ಮತ್ತು 29329-29 35/2018 (ಎಲ್ಆರ್-ಆರ್ಇಎಸ್)

ಆಜ್ಞೆ

ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ:

ಇಲ್ಲಿನ ಅರ್ಜಿದಾರರು,ದಿನಾಂಕ: 25-02-2014ರ ನಡಾವಳಿಗಳಸಂಖ್ಯೆ: ಎಲ್ಆರ್ಎಫ್:ಐಎನ್ಎಎಂ (ಎಂಎಲ್ಆರ್) 8/2006-07 ರಲ್ಲಿ ಎರಡನೇ ಪ್ರತ್ಯರ್ಜಿದಾರ ಜಿಲ್ಲಾಧಿಕಾರಿಯವರು ಆದೇಶವನ್ನು ಸ್ಥಿರೀಕರಿಸಿರುವಲ್ಲಿ ಬೆಂಗಳೂರಿನ ಕರ್ನಾಟಕ ಅಪೀಲು ನ್ಯಾಯಾಧೀಕರಣ (ಸಂಕ್ಷಿಪ್ತತೆಗಾಗಿ ' ಕೆಎಟಿ ' ಎಂದು ಕರೆಯಲಾಗಿರುತ್ತದೆ) ದ ಕಡತದ ಮೇಲೆ ಅಪೀಲುಸಂಖ್ಯೆ: 531/2014 ರಲ್ಲಿನ ಅಪೀಲುದಾರರಾಗಿರುತ್ತಾರೆ.

2. ಈ ರಿಟ್ ಅರ್ಜಿಯ ಸಂಕ್ಷಿಪ್ತ ವಾಸ್ತವಾಂಶಗಳು ಈ ಮುಂದಿನಂತಿರುತ್ತವೆ:

ಮೊದಲ ಅರ್ಜಿದಾರ-ಎಲ್.ಎಸ್.ನಾರಾಯಣಪ್ಪ, ಈತನ ಸಹೋದರ ಎರಡನೇ ಅರ್ಜಿದಾರ-ಎಲ್.ಎಸ್.ನರಸರಾಜು ಹಾಗೂ ಅವರ ಮತ್ತೊಬ್ಬ ಸಹೋದರ, ಮೂರನೇ ಅರ್ಜಿದಾರ-ಎಲ್.ಎಸ್.ಹನುಮಂತರಾಜುರವರುಗಳು ಕೋಲಾರ ಜಿಲ್ಲೆಯ, ಮಾಲೂರು ತಾಲೂಕಿನ ಲಕ್ಕೂರು ಗ್ರಾಮ ಹೋಬಳಿಯಲ್ಲಿನ ಶ್ರೀ ಮದ್ದೂರಮ್ಮ ದೇವಾಲಯದ ಅರ್ಚಕರುಗಳಾಗಿರುತ್ತಾರೆ.ಸದರಿ ದೇವಾಲಯವು ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಲಕ್ಕೂರು ಗ್ರಾಮದ ಸರ್ವೆಸಂಖ್ಯೆ: 300 ರಲ್ಲಿ 5 ಎಕರೆ, 1 ಗುಂಟೆ ಇನಾಮು ಜಮೀನನ್ನು ಹೊಂದಿರುತ್ತದೆ.ಸದರಿ ಜಮೀನು ಈ ರಿಟ್ ಅರ್ಜಿಗಳ ಅರ್ಜಿಗಳ ಹಾಗೂ ಈ ಮುಂಚಿನ ವ್ಯಾಜ್ಯದ ವಸ್ತುವಿಷಯವಾಗಿರುತ್ತದೆ.ಇಲ್ಲಿನ ಅರ್ಜಿದಾರರು, ಅರ್ಜಿದಾರ ಸಂಖ್ಯೆ 1, 2 ಹಾಗೂ ಅವರ ಸಹೋದರರು ಕರ್ನಾಟಕ (ಧರ್ಮಾರ್ಥ ಹಾಗೂ ದತ್ತಿ) ಇನಾಮುಗಳ ರದ್ದಿಯಾತಿ ಅಧಿನಿಯಮ, 1955 (ಸಂಕ್ಷಿಪ್ತತೆಗಾಗಿ ' ಅಧಿನಿಯಮ ' ಎಂದು ಕರೆಯಲಾಗಿರುತ್ತದೆ) ರ 6 ಎ ಪ್ರಕರಣದಡಿಯಲ್ಲಿ ಮೇಲೆ ಹೇಳಿದ ದೇವಸ್ಥಾನದ ಅರ್ಚಕರಂತೆ ಮೇಲೆ ಹೇಳಿದ ಜಮೀನಿನ ಸಂಬಂಧದಲ್ಲಿ ಅಧಿಭೋಗದ ಹಕ್ಕುಗಳನ್ನು ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

3. 16-12-1974 ರಂದು ಸಲ್ಲಿಸಿದ ಸದರಿ ಅರ್ಜಿಯನ್ನು ಅಧಿನಿಯಮದ 6 ನೇ ಪ್ರಕರಣದಡಿಯಲ್ಲಿ ಇಲ್ಲಿನ ಪ್ರತ್ಯರ್ಜಿದಾರ ಸಂ .3 ಹಾಗೂ 4 ಸಲ್ಲಿಸಿದಂಥ ಅರ್ಜಿಯನ್ನು ಅಂಗೀಕರಿಸಿರುತ್ತಾರೆಂಬ ಆಧಾರದ ಮೇಲೆದಿನಾಂಕ: 19-07-1982 ರಂದಿನ ಆದೇಶದ ಮೂಲಕ ತಿರಸ್ಕರಿಸಲಾಗಿರುತ್ತೆಂಬುದನ್ನು ನಮಗೆ ಕಂಡುಬಂದಿರುತ್ತದೆ.ಜಮೀನನ್ನು ಪ್ರತ್ಯರ್ಜಿದಾರ ಸಂ .3 ಹಾಗೂ 4 ನೇ ಪ್ರತ್ಯರ್ಜಿದಾರರ ಹೆಸರಿನಲ್ಲಿ ಈಗಾಗಲೇ ಅನುದಾನ ನೀಡಲಾಗಿರುತ್ತದೆ; ಇದರಿಂದಾಗಿ, ಅರ್ಜಿದಾರರ ಅರ್ಜಿಯು ಮಾಲೂರಿನ ಭೂ ನ್ಯಾಯಾಧೀಕರಣದಿಂದದಿನಾಂಕ: 19-07-1982ರ ಆದೇಶದ ಒಟ್ಟು ಅಭಿಪ್ರಾಯದ ಮೇರೆಗೆ ಊರ್ಜಿತವಾಗಿರುವುದಿಲ್ಲ.

4. ಅರ್ಜಿದಾರರು ಸದರಿ ಆದೇಶವನ್ನು ಪ್ರಶ್ನಿಸಿರುವುದಿಲ್ಲ.ಸದರಿ ಸ್ವತ್ತಿನ ಸಂಬಂಧದಲ್ಲಿ ಅಧಿಭೋಗದ ಹಕ್ಕುಗಳನ್ನು ಕೋರಿ ಈಗಾಗಲೇ ಅರ್ಜಿಯನ್ನು ಸಲ್ಲಿಸಿರುವುದರಿಂದ ಸದರಿ ಆದೇಶವು ದೋಷಪೂರ್ಣವಾಗಿದೆಯೆಂದು ಸದರಿ ಜಮೀನಿನ ಮೇಲೆ ಪ್ರತ್ಯರ್ಜಿದಾರ ಸಂ .3 ಹಾಗೂ 4 ರ ಹೆಸರಿನಲ್ಲಿ ಸಾಗುವಳಿ ಚೀಟಿಯನ್ನು ನೀಡುವಲ್ಲಿ ನ್ಯಾಯಾಧೀಕರಣವು ಹೊರಡಿಸಿದ ಆದೇಶವನ್ನು ಪ್ರಶ್ನಿಸುವುದಕ್ಕೆ ಬದಲಾಗಿ, ನ್ಯಾಯಾಧೀಕರಣವು, ಎರಡೂ ಅರ್ಜಿಗಳನ್ನು ಒಟ್ಟಿಗೆ ಪರಿಗಣಿಸಬೇಕಾಗಿರುತ್ತದೆ ಹಾಗೂ ಅವುಗಳ ಮೇಲೆ ಸೂಕ್ತ ಆದೇಶಗಳನ್ನು ಹೊರಡಿಸಬೇಕಾಗಿರುತ್ತದೆ.ಸದರಿ ಪ್ರಕರಣದಲ್ಲಿ ಇದನ್ನು ಮಾಡದಿರುವುದರಿಂದ, ಇಲ್ಲಿನ ಪ್ರತ್ಯರ್ಜಿದಾರ ಸಂ .3 ಹಾಗೂ 4 ರ ಹೆಸರಿನಲ್ಲಿನ ಅಧಿಭೋಗದ ಹಕ್ಕನ್ನು ನೀಡುವಲ್ಲಿ ನ್ಯಾಯಾಧೀಕರಣದ ಆದೇಶವನ್ನು ರದ್ದುಪಡಿಸುವ ನಿವಾರಣೆಗಾಗಿ ಹಾಗೂ ಆ ತರುವಾಯ, ಅರ್ಜಿದಾರರ

ಹಾಗೂ ಅದರೊಟ್ಟಿಗೆ ಪ್ರತ್ಯರ್ಜಿದಾರ ಸಂ .3 ಹಾಗೂ 4 ರ ಅರ್ಜಿದಾರರ ಅರ್ಜಿಗಳನ್ನು ಕೈಗೆತ್ತಿಕೊಳ್ಳಲು ಹಾಗೂ ಗುಣಾರ್ಹತೆಗಳ ಆಧಾರದ ಮೇಲೆ ಸದರಿ ಅರ್ಜಿಗಳನ್ನು ವಿಲೆ ಮಾಡಲು ಬರಮಾಡಿಕೊಂಡಂಥ ದೋಷವಾಗಿರುತ್ತದೆ.

5. ಭೂ ನ್ಯಾಯಾಧೀಕರಣದ ಅಪೀಲು ಪ್ರಾಧಿಕಾರದ ಎದುರು ಇಲ್ಲಿನ ಅರ್ಜಿದಾರರು ಸಲ್ಲಿಸಿರುವಂಥ ಅಪೀಲನ್ನು, ನ್ಯಾಯಾಧೀಕರಣದ ಇತರೆ ಸದಸ್ಯರು, 3 ನೇ ಹಾಗೂ 4 ನೇ ಪ್ರತ್ಯರ್ಜಿದಾರರನ್ನು ಗೇಣಿದಾರರಂತೆ ಗುರುತಿಸಿ ನ್ಯಾಯಾಧೀಕರಣವು ಈಗಾಗಲೇ ಹೊರಡಿಸಿದಂಥ ಈ ಮುಂಚಿನ ಆದೇಶಕ್ಕೆ ಪೂರಕವಾಗಿರುವುದರಿಂದ ನ್ಯಾಯಾಧೀಕರಣದ ನ್ಯಾಯಿಕ ಸದಸ್ಯರು ಇಲ್ಲಿನ ಅರ್ಜಿದಾರರು ಒತ್ತಾಯಿಸಿದ ಆಧಾರಗಳ ಪರವಾಗಿರುವಲ್ಲಿ, ಭೂ ನ್ಯಾಯಾಧೀಕರಣದ ಅಪೀಲು ಪ್ರಾಧಿಕಾರದ ಮುಂದೆ ಬಹು ಆಯಾಮಗಳೊಂದಿಗೆ ನಿರ್ಧರಿಸಬೇಕಾಗಿರುತ್ತದೆ.ಈ ಹಿನ್ನಲೆಯಲ್ಲಿ ಭೂ ನ್ಯಾಯಾಧೀಕರಣದ ಅಪೀಲು ಪ್ರಾಧಿಕಾರವು, ಮಾನ್ಯ ಸಿವಿಲ್ ನ್ಯಾಯಾಧೀಶರು ಕರ್ನಾಟಕ ಭೂಸುಧಾರಣಾ ಅಧಿನಿಯಮ 1961 ರ ಪ್ರಕರಣ 116 (ಬಿ) ರಡಿಯಲ್ಲಿ (ಕೆಎಲ್ಆರ್ಎ ' ಸಂಕ್ಷಿಪ್ತವಾಗಿ) ಡಿಎಲ್ಆರ್ 433/1986 ರಲ್ಲಿ ಮಾನ್ಯ ಸಿವಿಲ್ ನ್ಯಾಯಾಧೀಶರು,ದಿನಾಂಕ: 08-08-1988ರ ಆದೇಶದ ಮೂಲಕ ನ್ಯಾಯಿಕ ಸದಸ್ಯರ ದೃಷ್ಟಿಕೋನವನ್ನು ಒಪ್ಪಿಕೊಂಡು, ಪ್ರತ್ಯರ್ಜಿದಾರ ಸಂ .3 ನೇ ಹಾಗೂ 4 ರ ಪರವಾಗಿ ಮಾಡಿದ ಅಧಿಭೋಗದ ಹಕ್ಕುಗಳನ್ನು ಸ್ಥಿರೀಕರಿಸುವಲ್ಲಿ ಇತರೆ ಸದಸ್ಯರು ತಳೆದ ದೃಷ್ಟಿಕೋನವನ್ನು ತಿರಸ್ಕರಿಸಿರುತ್ತಾರೆ.

6. ಡಿಎಲ್ಆರ್.433/1986 ರಲ್ಲಿನ ಕೆಜಿಎಫ್ನ ಸಿವಿಲ್ ನ್ಯಾಯಾಧೀಶರ ಆದೇಶವು, ಎಲ್ಆರ್ಆರ್ಪಿ ಸಂಖ್ಯೆ 354/1989 ರಲ್ಲಿನ ಈ ನ್ಯಾಯಾಲಯದ ಸಮನ್ವಯ ಪೀಠದ ಮುಂದೆ ಪ್ರಶ್ನಿಸಿರುವ ವಸ್ತುವಿಷಯವಾಗಿದಲ್ಲಿ 07-11-1997ರ ತನ್ನ ಆದೇಶದ ಮೂಲಕ ಈ ನ್ಯಾಯಾಲಯದ ಸಮನ್ವಯ ಪೀಠವು, ಡಿಎಲ್ಆರ್ಎ .433/1986 ರಲ್ಲಿ ಮಾನ್ಯ ಸಿವಿಲ್ ನ್ಯಾಯಾಧೀಶರು ಹೊರಡಿಸಿದ 08-08-1988ರ ಆದೇಶವನ್ನು ರದ್ದುಪಡಿಸಿ, ಮರುಪರಿಗಣನೆಗಾಗಿ ಕೋಲಾರದ ಜಿಲ್ಲಾಧಿಕಾರಿಗಳಿಗೆ ವಿಷಯವನ್ನು ಹಿಂದುರುಗಿಸಿರುತ್ತದೆ.ಸದರಿ ಹಿಂದಿರುಗಿಸಲಾದ ವಿಷಯವನ್ನು, ಕೈಗೆತ್ತಿಕೊಂಡ ಜಿಲ್ಲಾಧಿಕಾರಿಗಳು, ನಡಾವಳಿಸಂಖ್ಯೆ: ಎಲ್ಆರ್ಆರ್ಪಿ (ಐಎನ್ಎಂ) (ಎಚ್ಎನ್ಎಂ) 08/2006-07 ರಲ್ಲಿ, 5 ಎಕರೆ 1 ಗುಂಟೆ ವಿಸ್ತೀರ್ಣ ಅಳತೆಯ ಜಮೀನನ್ನು ಲಕ್ಕೂರು ಗ್ರಾಮದ ಸರ್ವೆ ಸಂಖ್ಯೆ 300 ರ ಉಲ್ಲೇಖದೊಂದಿಗೆ ಪ್ರತ್ಯರ್ಜಿದಾರ ಸಂಖ್ಯೆ 3 ಹಾಗೂ 4 ರ ಹೆಸರಿನಲ್ಲಿ ಅಧಿಭೋಗದ ಹಕ್ಕುಗಳನ್ನು ನೀಡಿ ಭೂ ನ್ಯಾಯಾಧೀಕರಣದ ಆದೇಶವನ್ನು ಸಿರೀಕರಿಸಿ ದಿನಾ ಂ ಕ:25-02-2014 ಆದೇಶದ ಮೂಲಕ ಮಾಡುವಂತಾಗಿರುತ್ತದೆ.ಜಿಲ್ಲಾಧಿಕಾರಿಯವರ ಸದರಿ ಆದೇಶವು, ಕೆಎಟಿಯ ಕಡತದ ಮೇಲಿನ ಅಪೀಲುಸಂಖ್ಯೆ: 531/2014 ರಲ್ಲಿ ಇಲ್ಲಿನ ಅರ್ಜಿದಾರರ ಪ್ರಶ್ನೆಗೆ ಒಳಪಟ್ಟಿದ್ದು, ಕೆಎಟಿಯುದಿನಾಂಕ: 24-01-2018ರ ತನ್ನ ತೀರ್ಪಿನ ಮೂಲಕ ಜಿಲ್ಲಾಧಿಕಾರಿಗಳ ಆದೇಶವನ್ನು ಸ್ಥಿರೀಕರಿಸಿದ್ದು, ಇದು ಈ ರಿಟ್ ಅರ್ಜಿಗಳಲ್ಲಿನ ಪ್ರಶ್ನೆಯ ವಸ್ತುವಿಷಯವಾಗಿರುತ್ತದೆ.

7. ಭೂ ನ್ಯಾಯಾಧೀಕರಣದ ಅಪೀಲು ಪ್ರಾಧಿಕಾರದ ಮುಂದಿದ್ದ ಸಮಯದಿಂದಲೂ ಇಲ್ಲಿನ ಅರ್ಜಿದಾರರ ವಾದದ ಸಾರವೆಂದರೆ, ಡಿಎಲ್ಆರ್ಎ .433/1986 ರಲ್ಲಿನ ಸಿವಿಲ್ ನ್ಯಾಯಾಧೀಶರಿಗೆ ಉಲ್ಲೇಖಿಸಿದಂಥ, ಕೃಷ್ಣ ಶೆಟ್ಟಿ ವಿರುದ್ಧ ಭೂ ನ್ಯಾಯಾಧೀಕರಣ, ಸೋಮವಾರಪೇಟೆ ' ಪ್ರಕರಣದಲ್ಲಿನ ಈ ನ್ಯಾಯಾಲಯದ ವಿಭಾಗೀಯ ಪೀಠವು ನೀಡಿದ ತೀರ್ಪಿನೊಂದಿಗೆ ಸ್ವಾಮ್ಯತೆಯಿದೆಯೆಂದು ಉದಾಹರಿಸಿರುವುದಾಗಿದ್ದು, ಅದರಲ್ಲಿನ, ಸಾದೃಶ ಸಂದರ್ಭಗಳಡಿಯಲ್ಲಿ ಅಂದರೆ, ನ್ಯಾಯಾಧೀಕರಣದ ಮುಂದೆ ಒಂದಕ್ಕಿಂತ ಹೆಚ್ಚು ಅರ್ಜಿಗಳಿರುವಾಗ, ಸದರಿ ಚ ಅರ್ಜಿಗಳನ್ನು ನಿರ್ಧರಿಸಬೇಕಾದ ರೀತಿಯನ್ನು ಈ ಮು ಂ ದಿನ ಂ ತೆ ಪರಿಗಣಿಸಬೇಕಾಗಿರುತ್ತದೆ:

"5. ಶ್ರೀ ಗೌರಿ ಶಂಕರ್, ನಮೂನೆ ಸಂಖ್ಯೆ 7 ರಲ್ಲಿ ಟಿ.ಕೆ. ಪಪ್ಪುರವರ ಮಕ್ಕಳ ಮೂಲಕ ಅರ್ಜಿಯನ್ನು ಸಲ್ಲಿಸಿದ್ದು, ಸಲ್ಲಿಸಿದ ಸದರಿ ಅರ್ಜಿಗಳು ವಿಸ್ತರಿಸಿದ ಅವಧಿಯೊಳಗೆ ಇದ್ದವೆಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ.ಒಮ್ಮೆ ಅಂಥ ಅರ್ಜಿಗಳನ್ನು ಹಾಗೆ ಯುಕ್ತವಾಗಿ ಸಲ್ಲಿಸಿದಲ್ಲಿ ಅಂಥ ಅರ್ಜಿಗಳನ್ನು ಪರಿಗಣಿಸಬೇಕಾಗಿರುವುದು ಭೂ ನ್ಯಾಯಾಧೀಕರಣದ ಕರ್ತವ್ಯವಾಗಿರುತ್ತದೆ.ಭೂ ನ್ಯಾಯಾಧೀಕರಣವು, ಸದರಿ ಜಮೀನಿನ ಸಂಬಂಧದಲ್ಲಿ ಬೇರೆ ಕೆಲ ವ್ಯಕ್ತಿಗಳಿಂದ ಈ ಮೊದಲು ಸಲ್ಲಿಸಿದ ಅರ್ಜಿಯನ್ನು ಈಗಾಗಲೇ ವಿಲೆ ಮಾಡಲಾಗಿದೆಯೆಂಬ ಆಧಾರದ ಮೇಲೆ, ಮತ್ತೆ ಸಲ್ಲಿಸುವ ಅರ್ಜಿಯನ್ನು ನಿರಾಕರಿಸುವಂತಿಲ್ಲ.48- ಎ ಪ್ರಕರಣದಡಿಯಲ್ಲಿನ ತರುವಾಯದ ಅರ್ಜಿಯನ್ನು ಭೂ ನ್ಯಾಯಾಧೀಕರಣವು ಪರಿಗಣಿಸಬಹುದಾದ ಒಂದೇ ದಾರಿಯೆಂದರೆ, ಮೊದಲಿನ ಅರ್ಜಿಯ ಮೇಲಿನ ತನ್ನ ಮೊದಲಿನ ನಿರ್ಣಯಗಳನ್ನು ಮತ್ತೊಮ್ಮೆ ಚಾಲನೆ

ಮಾಡುವುದು ಹಾಗೂ ಎರಡೂ ಅರ್ಜಿಗಳನ್ನು ಒಟ್ಟಿಗೆ ಪರಿಗಣಿಸಿ, ವಿಷ ಂ ತುವನ್ನು ಹೊಸ ದಾಗಿ ನಿರ್ಧರಿಸುವುದಾಗಿರುತ್ತದೆ. "

8. ಸದರಿ ತೀರ್ಪನ್ನು ಉದಾಹರಿಸಿ, ಇಲ್ಲಿನ ಅರ್ಜಿದಾರರು, ಕೆಎಟಿಯು ದಿನಾಂಕ 19-07-1982ರ ತನ್ನ ಆದೇಶದ ಮೂಲಕದಿನಾಂಕ: 16-12-1974ರ ಅವರ ಅರ್ಜಿಯು ತಿರಸ್ಕರಣೆಯ ಆದೇಶವನ್ನು ಸ್ವಾತಂತ್ರವಾಗಿ ಪ್ರಶ್ನಿಸದಿದ್ದಾಗ್ಯೂ, ಅವರು ಸಲ್ಲಿಸಿದಂಥ ಅರ್ಜಿಯನ್ನು ಪರಿಗಣನೆಗೆ ತೆಗೆದುಕೊಳ್ಳದೆ ಪ್ರತ್ಯರ್ಜಿದಾರ ಸಂಖ್ಯೆ 3 ಹಾಗೂ 4 ರ ಪರವಾಗಿ ಜಮೀನನ್ನು ಅನುದಾನ ಮಾಡಲು ಆದೇಶವನ್ನು ಪ್ರಶ್ನಿಸುವಲ್ಲಿ ಸಮರ್ಥಿಸಿದಲ್ಲಿ, ಇತರೆ ಪ್ರಾಧಿಕಾರಿಗಳು ಅನುಸರಿಸಿದಂಥ ಕೆಎಲ್ಆರ್ ಅಧಿನಿಯಮದ 116 (ಬಿ) ಪ್ರಕರಣದಡಿಯಲ್ಲಿ ಉಲ್ಲೇಖಿಸಿರುವಂಥ ವಿಷಯದಲ್ಲಿ ಸಿವಿಲ್ ನ್ಯಾಯಾಲಯವು ಯುಕ್ತವಾಗಿ ಪರಿಗಣಿಸಿರುತ್ತದೆ.ಎಲ್ಆರ್ಪಿಯಲ್ಲಿ ಈ ನ್ಯಾಯಾಲಯದ ಸಮನ್ವಯ ಪೀಠದ ಮೂಲಕ, ಹೊಸದಾಗಿ ಪರಿಗಣಿಸಲು ವಿಷಯವನ್ನು ಮತ್ತೊಮ್ಮೆ ಪರಿಗಣನೆಗೆ ತೆಗೆದುಕೊಂಡಿದ್ದಾಗ್ಯೂ, ಈ ತೀರ್ಪನ್ನು ಜಿಲ್ಲಾಧಿಕಾರಿಗಳಾಗಲೀ ಅಥವಾ ಕೆಎಟಿಯಾಗಲಿ ಗಮನಿಸಿರುವುದಿಲ್ಲ.

9. ಪ್ರತ್ಯರ್ಜಿದಾರ ಸಂಖ್ಯೆ 3 3 ಹಾಗೂ 4 ರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು, ಒಮ್ಮೆ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಿದ ಆದೇಶವು ಅಂತಿಮತೆಯನ್ನು ತಲುಪಿ, ಅದು ಪ್ರಶ್ನಿತವಾಗದಿದ್ದಲ್ಲಿ, ಅಧಿನಿಯಮದ 6 ನೇ ಪ್ರಕರಣದಡಿಯಲ್ಲಿನ 3 ನೇ ಹಾಗೂ 4 ನೇ ಪ್ರತ್ಯರ್ಜಿದಾರರು ಸಲ್ಲಿಸಿದ ಅರ್ಜಿಯಲ್ಲಿ ಕೋರಿದಂಥ ಅನುದಾನವನ್ನು ನೀಡುವುದಕ್ಕೆ ಮುಂದಾಗಲು ಭೂ ನ್ಯಾಯಾಧೀಕರಣಕ್ಕೆ ಇದು ಮುಕ್ತವಾಗಿರುತ್ತದೆ.ಆದ್ದರಿಂದ, ಅನುಬಂಧ-ಜೆ ಮೇರೆಗೆ ಕೆಎಟಿಯು ಸ್ಥಿರೀಕರಿಸಿದಂಥ ಅನುಬಂಧ-ಜಿ ಮೇರೆಗಿನ ಜಿಲ್ಲಾಧಿಕಾರಿಗಳ ಆದೇಶವು ಈ ನ್ಯಾಯಾಲಯದ ಮಧ್ಯಪ್ರವೇಶ ಮಾಡುವಂತಿರುವುದಿಲ್ಲ.

10. ಈ ನಡುವೆ, ರಾಜ್ಯವನ್ನು ಪ್ರತಿನಿಧಿಸುವ ಮಾನ್ಯ ಹೆಚ್ಚುವರಿ ಸರ್ಕಾರಿ ನ್ಯಾಯವಾದಿಗಳು, ಭೂ ನ್ಯಾಯಾಧೀಕರಣದಿಂದ ಕೆಎಟಿವರೆಗೂ ನಡೆದಂಥ ನಡಾವಳಿಗಳ ಸರಣಿಯಲ್ಲಿ ಯಾರೇ ಪ್ರಾಧಿಕಾರಿಗಳು ನೋಡದಂಥ, ಈ ವ್ಯಾಜ್ಯದ ಮತ್ತೊಂದು ಆಯಾಮವೆಂದರೆ, ಪ್ರಶ್ನಿತ ಜಮೀನು ಸರ್ಕಾರಿ ಜಮೀನೆಂಬುದಾಗಿರುತ್ತದೆ.ಇವರ ಪ್ರಕಾರ, ಸದರಿ ಜಮೀನನ್ನು ಎಂದಿಗೂ ಗೇಣಿ ನೀಡಿರುವುದಿಲ್ಲ ಅಥವಾ ರಾಜ್ಯದಿಂದ ಗೇಣಿ ಒಳಪಟ್ಟಿರುವುದಿಲ್ಲ.ಒಪ್ಪಿಕೊಂಡಂತೆ, ಲಕ್ಕೂರು ಗ್ರಾಮದ ಶ್ರೀ ಮದ್ದೂರಮ್ಮ ದೇವಾಲಯ ಹಾಗೂ ಸದರಿ ದೇವಾಲಯದ ಸ್ಥಾನಮಾನವು 1917 ನೇ ವರ್ಷದಲ್ಲಿ ಮತ್ತೆ ಮುಜರಾಯಿ ದೇವಾಲಯವೆಂದು ಮಾನ್ಯತೆ ಪಡೆದಿರುತ್ತದೆ.ಆದ್ದರಿಂದ, ಅಧಿನಿಯಮದ ತಿದ್ದುಪಡಿಯಾದ ಉಪಬಂಧವು 01-07-1970 ರಂದು ಜಾರಿಗೆ ಬಂದಾಗ, ಜಮೀನು, ಮುಜರಾಯಿ ದೇವಾಲಯದಂತೆ ಒಪ್ಪಿಕೊಂಡಂತೆ ಈಗಾಗಲೇ ಸರ್ಕಾರದೊಂದಿಗೆ ನಿಹಿತವಾಗಿರುತ್ತದೆ.1917 ನೇ ವರ್ಷದಲ್ಲಿದ್ದಂತೆ, ಪ್ರತ್ಯರ್ಜಿದಾರ ಸಂಖ್ಯೆ 3 ಹಾಗೂ 4 ರವರುಗಳು ಸದರಿ ಜಮೀನಿನ ಗೇಣಿದಾರರೆಂದಾಗಲೀ ಅಥವಾ ಅರ್ಚಕರೆಂದಾಗಲೀ ಕೃಷಿಕರೆಂದಾಗಲೀ ಮಾನ್ಯತೆ ಪಡೆದ ಆರ್ಟಿಸಿಯನ್ನು ಯಾವುದೇ ನಮೂದುಗಳಿರುವುದಿಲ್ಲ.ಅದು ಪ್ರಕರಣವಾಗಿರುವಾಗ, ಇದನ್ನು ಯಾರೇ ಪ್ರಾಧಿಕಾರಿಗಳು ಗಮನಿಸಿರುವುದಿಲ್ಲ.ಇದರಿಂದ ಗೊಂದಲವುಂಟಾಗಿ, ಜಮೀನಿನ ಸ್ವಾಮ್ಯದ ಉಲ್ಲೇಖದೊಂದಿಗಿನ ಮುಖ್ಯವಾದ ಆಯಾಮವನ್ನೇ ನೋಡದೆ ಹಲವಾರು ನಿರ್ಣಯಗಳನ್ನು ನೀಡಿರುತ್ತರೆ.

11. ಆದ್ದರಿಂದ, ಸದರಿ ಜಮೀನಿನಲ್ಲಿ ಯಾರೊಬ್ಬರೂ ಕೃಷಿ ಮಾಡದಿರುವುದರಿಂದ, ಅಧಿನಿಯಮದ 6 ನೇ ಪ್ರಕರಣದಡಿಯಲ್ಲಿನ ಪ್ರತ್ಯರ್ಜಿದಾರ ಸಂಖ್ಯೆ 3 ಹಾಗೂ 4 ಹಾಗೂ ಅಧಿನಿಯಮದ 6 ಎ ಪ್ರಕರಣದಡಿಯಲ್ಲಿ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ಪರಿಗಣಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.ಸದರಿ ಜಮೀನಿನ ಉಲ್ಲೇಖದೊಂದಿಗೆ ರಾಜಸ್ವ ನಮೂದುಗಳನ್ನು ಸರ್ಕಾರದಲ್ಲಿ ನಿಹಿತವಾಗಿರುವ ಜಮೀನಿನ ನ ಂ ತರದಲ್ಲಿರುವ ಂ ಥ 1971-72ನೇ ವರ್ಷದಿಂದ ಆರ್ಟಿಸಿಯಲ್ಲಿ ಗುರುತಿಸಬಹುದಾಗಿದ್ದು, ಸದರಿ ನಮೂದುಗಳೂ, ಅರ್ಜಿದಾರ-ಅರ್ಚಕರ ಹೆಸರಿನಲ್ಲಾಗಲೀ ಅಥವಾ ಗೇಣಿದಾರರೆಂದು ಕರೆಯುತ್ತಿರುವಂಥ ಪ್ರತ್ಯರ್ಜಿದಾರ ಸಂಖ್ಯೆ 3 ಹಾಗೂ 4 ರವರುಗಳ ಹೆಸರಿನಲ್ಲಾಗಲೀ ರಾಜ್ಯವು ನೀಡಿರುವ ಗೇಣಿಯ ಮೂಲಕವಾಗಿರುವಾಗಲೀ ಅಥವಾ ಅಧಿಕೃತತೆಯ ಮೂಲಕವಾಗಿಯಾಗಲಿ ಪೂರಕವಾಗಿರುವುದಿಲ್ಲ.

12. ಪ್ರತ್ಯರ್ಜಿದಾರ 3 ಹಾಗೂ 4 ರವರುಗಳ ಪರವಾಗಿ ವಾದ ಮಾಡಿದ ಮಾನ್ಯ ನ್ಯಾಯವಾದಿಗಳು ಹಾಗೂ ಸರ್ಕಾರವನ್ನು ಪ್ರತಿನಿಧಿಸಿದ ಹೆಚ್ಚುವರಿ ಸರ್ಕಾರಿ ವಕೀಲರ ವಾದವಿವಾದಗಳನ್ನು ಎಚ್ಚರಿಕೆಯಿಂದ ಆಲಿಸಿದ ತರುವಾಯ, ಅಧಿನಿಯಮದ 6 ನೇ ಪ್ರಕರಣದಡಿಯಲ್ಲಿ ಸಲ್ಲಿಸಿದಂಥ ಪ್ರತ್ಯರ್ಜಿದಾರ ಸಂಖ್ಯೆ 3 ಹಾಗೂ 4

ರವರುಗಳ ಅರ್ಜಿಯೊಂದಿಗೆ ಇದನ್ನು ಸೇರಿಸದಿರುವಲ್ಲಿ 16-12 1974 ರಂದು ಅಧಿನಿಯಮದ 6 ಎ ಪ್ರಕರಣದಡಿಯಲ್ಲಿ ಸಲ್ಲಿಸಿದ ಅರ್ಜಿದಾರರ ಅರ್ಜಿಯನ್ನು ವಜಾಗೊಳಿಸುವಾಗ ಆರಂಭದಲ್ಲಿ ನ್ಯಾಯಾಧಿಕರಣವು ಗಂಭೀರ ಸ್ವರೂಪದ ದೋಷವನ್ನು ಎಸಗಿರುವುದನ್ನು ಸ್ಪಷ್ಟವಾಗಿ ಕಾಣಬಹುದಾಗಿರುತ್ತದೆ.ಸದರಿ ಅರ್ಜಿಗಳನ್ನು ಸ್ವಾತಂತ್ರವಾಗಿ ಪರಿಗಣನೆಗೆ ತೆಗೆದುಕೊಂಡಾಗ ಸಹ, ಈ ವಿಷಯದಲ್ಲಿ ವ್ಯವಹರಿಸಿದಂಥ ನ್ಯಾಯಾಧೀಕರಣವಾಗಲೀ ಇಲ್ಲವೇ ಅಪೀಲು ಪ್ರಾಧಿಕಾರವಾಗಲೀ ಅಥವಾ ಯಾರೇ ಅಧಿಕಾರಿಗಳಾಗಲೀ ಜಮೀನಿನ ಸ್ವಾಮ್ಯವು ನಿಹಿತವಾಗಿರುವುದು ಸರ್ಕಾರದ ಹೆಸರಿನಲ್ಲಿ ಅಥವಾ ದೇವಸ್ಥಾನದ ಹೆಸರಿನಲ್ಲಿಯೇ ಎಂಬುದನ್ನು ಗಮನಿಸಿರುವುದಿಲ್ಲವೆಂಬುದು ಕಂಡುಬಂದಿರುತ್ತದೆ.

13. ಒಪ್ಪಿಕೊಂಡಂತೆ, ದೇವಾಲಯವು ಮುಜರಾಯಿ ದೇವಾಲಯವಾಗಿರುತ್ತದೆ.ಜಮೀನು ಸರ್ಕಾರಿ ಜಮೀನಾಗಿರುವುದರಿಂದ ದೇವಾಲಯದ ಹೆಸರಿನಲ್ಲಿರುವುದಿಲ್ಲ.ಪ್ರತ್ಯರ್ಜಿದಾರ ಸಂಖ್ಯೆ 3 ಹಾಗೂ 4 ರವರುಗಳ ಹೆಸರಿನಲ್ಲಿ ಕೃಷಿ ಹಕ್ಕುಗಳನ್ನು ನೀಡಿ ಸರ್ಕಾರ ಅಧಿಕೃತತೆ ಇಲ್ಲದ ಹೊರತು ಸರ್ಕಾರಿ ಜಮೀನನ್ನು, ಅವರು ತಮ್ಮ ಜಮೀನೆಂದು ಕ್ಲೇಮುಮಾಡಲು ಸಾಧ್ಯವಾಗುವುದಿಲ್ಲ.ವಾಸ್ತವವಾಗಿ, ಆರ್ಟಿಸಿ ಸಹ, 1971-72ನೇ ವರ್ಷದಿಂದ ಮಾತ್ರ ಗೇಣಿ ಹಕ್ಕುಗಳನ್ನು ಗುರುತಿಸ ಬಹುದಾಗಿದ್ದಾಗ್ಯೂ, ಅದು ಪ್ರತ್ಯರ್ಜಿದಾರ ಸಂಖ್ಯೆ 3 ಹಾಗೂ 4 ರವರುಗಳ ಗೇಣಿ ಹಕ್ಕನ್ನು ನೀಡುವ ಯಾವುದೇ ಆದೇಶದ ಮೂಲಕ ಬೆಂಬಲಿತವಾಗಿಲ್ಲವೆಂಬ ಅಂಶವನ್ನೇ ಸೂಚಿಸುವುದಕ್ಕೆ ಪೂರಕವಾಗಿರುತ್ತದೆ.

14. ಮೇಲಿನದರ ಹಿನ್ನಲೆಯಲ್ಲಿ, ಈ ನ್ಯಾಯಾಲಯವು,ದಿನಾಂಕ: 25-02-2014ರ ನಡಾವಳಿ ಸಂಖ್ಯೆ ಎಲ್‌ಆರ್ಎಫ್ (ಐಎನ್‌ಎಂ) (ಹೆಚ್‌ಎನ್‌ಎಂ) 08/2006-07 ರಲ್ಲಿನ ಜಿಲ್ಲಾಧಿಕಾರಿಗಳ ಆದೇಶವನ್ನು ಮಾತ್ರವಲ್ಲದೆ, ದಿನಾಂಕ 24-01-2018 ರಂದಿನ ತನ್ನ ತೀರ್ಪಿನಲ್ಲಿ ಇದನ್ನು ಸ್ಥಿರೀಕರಿಸಿ ನೀಡಿದ ಕೆಎಟಿಯ ತೀರ್ಪನ್ನು ಸಹ ರದ್ದುಪಡಿಸಬೇಕಾಗಿರುತ್ತದೆ.ಹಾಗೂ ಆ ಮೂಲಕ ಈ ವಿಷಯವನ್ನು ಸರ್ಕಾರಿ ಜಮೀನಾಗಿರುವ ಹಿನ್ನಲೆಯನ್ನು ಈ ಜಮೀನನ್ನು ಮರು ಪರಿಶೀಲಿಸಲು ಅಧಿಭೋಗದ ಹಕ್ಕನ್ನು ನೀಡಿ ಪರಿಗಣಿಸಲು ಗೇಣಿಯ ಮೇಲೆ ಅವರು ಕೃಷಿ ಮಾಡಲು ಪ್ರತ್ಯರ್ಜಿದಾರ ಸಂಖ್ಯೆ 3 ಹಾಗೂ 4 ರವರುಗಳಿಗೆ ಯಾವುದಾದರೂ ಅಧಿಕೃತತೆ ಇದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ವಿಷಯವನ್ನು ಹಿಂದಕ್ಕೆ ಕಳುಹಿಸಲಾಗಿರುತ್ತದೆ.ಅರ್ಚಕರುಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ವಾಸ್ತವವಾಗಿ ಅರ್ಚಕರು, ಯಾವುದೇ ಸಮಯದಲ್ಲೂ ಸದರಿ ಜಮೀನಿನ ಕೃಷಿ ಮಾಡಿರುತ್ತಾರೆಂಬುದನ್ನು ಸಾಬೀತುಪಡಿಸುವ ಯಾವೊಂದು ದಾಖಲೆಯೂ ಇರುವುದಿಲ್ಲವೆಂದು ಈ ನ್ಯಾಯಾಲಯವು ಪ್ರವರ್ಗೀಯವಾಗಿ ಗಮನಿಸಿರುತ್ತದೆ.

15. ಆದ್ದರಿಂದ, ವಾಸ್ತವ ಪರಿಸ್ಥಿತಿಯಲ್ಲಿ, ಅಧಿನಿಯಮದ 6 ಎ ಪ್ರಕರಣದಡಿಯಲ್ಲಿ ಅರ್ಜಿದಾರರ ಅರ್ಜಿಯನ್ನು ಪರಿಗಣಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂಬುದು ಈ ನ್ಯಾಯಾಲಯದ ಪರಿಗಣಿತ ಅಭಿಪ್ರಾಯವಾಗಿರುತ್ತದೆ.ಪ್ರತ್ಯರ್ಜಿದಾರ ಸಂಖ್ಯೆ 3 ಹಾಗೂ 4 ರವರುಗಳು ತಮ್ಮ ಅಧಿಭೋಗದ ಹಕ್ಕುಗಳನ್ನು ಸಾಬೀತುಪಡಿಸಲು ವಿಫಲವಾದಲ್ಲಿ ಜಿಲ್ಲಾಧಿಕಾರಿಗಳು, ದೇವಾಲಯದ ಪ್ರಯೋಜನಕ್ಕೆ ಜಮೀನನ್ನು ಉಳಿಸಿಕೊಳ್ಳಲು ಪರಿಗಣಿಸತಕ್ಕದ್ದು.

ಇಂಥ ಅಭಿಪ್ರಾಯದೊಂದಿಗೆ, ಈ ರಿಟ್ ಅರ್ಜಿಯನ್ನು ವಿಲೆ ಮಾಡಲಾಗಿರುತ್ತದೆ.